## 2

# ಅಬ್ರಹಾಮನೊಂದಿಗೆ ಮೆಸ್ಸಿಯತ್ವದ ಒಡಂಬಡಿಕೆ

"ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು" ಎಂದು ಆದಿಕಾಂಡ 22:18ರಲ್ಲಿ ದೇವರು ಅಬ್ರಹಾಮನಿಗೆ ವಾಗ್ದನ ಮಾಡಿದ್ದಾನೆ. ಪೌಲನು ಈ ವಾಗ್ದಾನವನ್ನು ಕ್ರಿಸ್ತನ ಬಗೆಗಿನ ಪ್ರವಾದನೆಯಂತೆ ಗಲಾತ್ಯ 3:16ರಲ್ಲಿ ಉಲ್ಲೇಖಿಸಿದ್ದಾನೆ: "ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ."

ಪೌಲನು ಹಿಬ್ರೂ ಮತ್ತು ಗ್ರೀಕ ಎರಡನ್ನೂ ಉಪಯೋಗಿಸಿದ್ದರಲ್ಲಿ ಸರಿಯಾಗಿ ರುವದಿಲ್ಲ ಎಂದು ಕೆಲವರು ಅವನನ್ನು ದೂಶಿದ್ದಾರೆ (ಗಲಾತ್ಯ 3:16), ಯಾಕಂದರೆ ಬೈಬಲಿನಲ್ಲಿ ಈ ಎರಡೂ ಪದಗಳು ಬಹುವಚನದಲ್ಲಿ ಮಾತ್ರ ಉಪಯೋಗಿಸಲ್ಪಟ್ಟಿದೆ ಎಂದು ಅವರು ನಂಬುತ್ತಾರೆ. ಆದರೆ ಇದು ಸತ್ಯವಾಗಿರುವದಿಲ್ಲ. "Seed" ಎಂಬುದಕ್ಕೆ ಹಿಬ್ರೂ ಪದವು *zera* ಮತ್ತು ಅದಕ್ಕೆ ಸಮಾನವಾದ ಗ್ರೀಕ ಪದವು *sperma*, ಇವು ಏಕವಚನ ರೂಪದಲ್ಲಿರುತ್ತವೆ ಮತ್ತು ಅರ್ಥದಲ್ಲಿ ಸಂಗ್ರಹವಾಗಿ ಇರಬಹುದು. ಹೀಗೆ ಈ ಪದ ಗಳು ಏಕವಚನವಾಗಿಯಾಗಲೀ, ಬಹುವಚನವಾಗಿಯಾಗಲೀ ಇರಬಹುದು. ಹೆಚ್ಚಾದ ಸಂದರ್ಭಗಳಲ್ಲಿ, ಹಿನ್ನೆಲೆ ಮಾತ್ರವೆ ಇಲ್ಲವೇ ಪದವನ್ನು ಉಪಯೋಗಿ ಸುತ್ತಿರುವವನು ಅರ್ಥ ಯಾವುದೆಂದು ನಿರ್ಧರಿಸಬಹುದು.

ಹಿಬ್ರೂ *zera* ಎಂಬ ಪದವು ಹಳೇ ಒಡಂಬಡಿಕೆಯಲ್ಲಿ ಬಹುವಚನ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದ್ದರೂ, ಕೆಲವು ವಾಕ್ಯಭಾಗಗಳಲ್ಲಿ *zera*ದ ಕೇವಲ ಸಾಧ್ಯವಾದ ಉಪಯೋಗವು ಏಕವಚನದಲ್ಲಿರುತ್ತದೆ. ಉದಾಹರಣೆಗಾಗಿ ನೋಡಿರಿ, ಆದಿಕಾಂಡ 4:25; 15:3; 21:13 ಮತ್ತು 1 ಸಮುವೇಲ 1:11.

"ವಂಶಜ" ಇಲ್ಲವೇ "ಸಂತತಿ" ಎಂದು ಭಾಷಾಂತರಿಸಲ್ಪಟ್ಟ *zera* ಎಂಬ ಪದವು ಈ ವಾಕ್ಯಭಾಗಗಳಲ್ಲಿ ಕೇವಲ ಏಕವಚನದಂತೆ ತೆಗೆದು ಕೊಳ್ಳಬಹುದು. ಅದೇ ರೀತಿಯಲ್ಲಿ ಗ್ರೀಕ ಪದ, KJV; GK.: *sperma* ಎಂಬುದು ಬಹಳ ಹೆಚ್ಚಾಗಿ ಬಹುವಚನದಲ್ಲಿ ಇರುವ ಪ್ರಕಾರ ಏಕವಚನದಲ್ಲಿಯೂ ಇರಬಹುದು - ಮತ್ತಾಯ 22:25ರಲ್ಲಿ "ಸಂತತಿ" *(sperma)* ಎಂಬುದು ಒಂದು ಇಲ್ಲವೇ ಹೆಚ್ಚು ಮಕ್ಕಳೆಂದು ಅರ್ಥ ಕೊಡುವದೆಂದು ತಿಳಿಯತಕ್ಕದ್ದು. ಮಾರ್ಕ 12:19 ವಿಶೇಷವಾಗಿ "ಮಗು ಇಲ್ಲ" (ಏಕವಚನ) ಎಂದು ಹೇಳುವದರಿಂದ, ಮಾರ್ಕ 12:20-22ರಲ್ಲಿಯ ವಿಷಯವೂ ಇದೇ ಆಗಿದೆ.

ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲಿಯೂ "seed" ಎಂಬುದಕ್ಕಾಗಿ ಈ ಮಾತುಗಳು ಏಕ ವಚನದವುಗಳಾಗಿರಬಹುದು. ಇದು ಅವುಗಳ

ಹೆಚ್ಚಾದ ಸಲದ ಅರ್ಥ ಎಂದಾಗುವದಿಲ್ಲ; ಆದರೆ ಅವು ಹಾಗೆ ಉಪಯೋಗಿಸಲ್ಪಟ್ಟ ಸಂಗತಿಯು, ಕೇವಲ ಒಬ್ಬನೇ ವ್ಯಕ್ತಿಗೆ ಅಂದರೆ ಯೇಸುವಿಗೆ ಸಂಬಂಧಿಸಿ ಏಕ ವಚನವನ್ನು ಉಪಯೋಗಿಸಿ, ಆದಿಕಾಂಡ 22:18ರಲ್ಲಿ ಕೇವಲ "ಒಬ್ಬನ" ಬಗ್ಗೆ ದೇವರು ಮಾತಾಡುತ್ತಿದ್ದನು ಎಂದು ಹೇಳುವಲ್ಲಿ ಪೌಲನು ತಪ್ಪಾಗಿರಲಿಲ್ಲ ಎಂದರ್ಥಕೊಡುತ್ತದೆ. ಇದನ್ನು ಹೇಳಿದ ದೇವರು ಮಾತ್ರವೇ ಆತನು ಏಕವಚನದ ಇಲ್ಲವೇ ಬಹುವಚನದ ಅರ್ಥದಲ್ಲಿ ಹೇಳಿದನೆಂದು ಬಲ್ಲವನಾಗಿರುತ್ತಾನೆ. ಹಾಗಿದ್ದರೂ, ದೇವರ ಆತ್ಮನು ಪೌಲನನ್ನು ನಡಿಸುತ್ತಿದ್ದನು (1 ಕೊರಿಂಥ 7:40); ಆದುದರಿಂದ, ಆತ್ಮನ ಮುಖಾಂತರ, "seed" ಎಂಬುದರ ಉಪಯೋಗದಲ್ಲಿ ದೇವರ ಉದ್ದೇಶವನ್ನು ಪೌಲನು ತಿಳಿದಿದ್ದನು. ದೇವರು ಅಬ್ರಹಾಮನ ಸಂತತಿಯಲ್ಲಿ ಒಬ್ಬಾತನಿಂದ, ಅವರೆಲ್ಲರಿಂದ ಅಲ್ಲ, ಜಗತ್ತನ್ನು ಆಶೀರ್ವದಿಸುವನೆಂಬುದು ದೇವರ ವಾಗ್ದಾನವಾಗಿತ್ತು.

ಅಬ್ರಹಾಮನ ಸಂತತಿಯ ಮುಖಾಂತರ ಭೂಲೋಕದ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸುವ ಈ ಒಪ್ಪಂದವು ದೇವರ ದೊಡ್ಡ ಒಡಂಬಡಿಕೆಗಳಲ್ಲಿ ಒಂದಾಗಿತ್ತು. ಇದರ ಮೇಲೆ ಯೆಹೂದ್ಯರ ನಿರೀಕ್ಷೆಯಷ್ಟೇ ಅಲ್ಲ, ಅನ್ಯಜನಾಂಗದವರ ನಿರೀಕ್ಷೆಯೂ ಅವಲಂಭಿಸಿತ್ತು, ಯಾಕಂದರೆ ವಾಗ್ದಾನವು ಲೋಕದ ಎಲ್ಲಾ ಕೂಟುಂಬಗಳನ್ನು ಒಳಗೊಂಡಿತ್ತು. ಯೆಹೂದಿ ಜನಾಂಗವು ಈ ಹೇಳಿಕೆಯು ತಮ್ಮನ್ನು ಮಾತ್ರವೇ ಒಳಗೊಂಡಿದೆ - ಒಂದು ಜನಾಂಗವಾಗಿ ತಾವು ಲೋಕದಲ್ಲಿಯ ಪ್ರತಿಯೊಬ್ಬರನ್ನು ಆಶೀರ್ವದಿಸುತ್ತೇವೆ ಎಂದು ಯೋಚಿಸಿತು. ಆದರೆ ಅದರ ಬದಲು, ದೇವರು ಇಂದು ತನ್ನ ಪ್ರಿಯ ಕುಮಾರನಾದ, ಯೇಸು ಕ್ರಿಸ್ತನಿಗೆ ಸಂಬಂಧಿಸಿ, ಆತನ ಮುಖಾಂತರ ಭೂಲೋಕದ ಎಲ್ಲಾ ಕುಟುಂಬಗಳಿಗೆ ಆಶೀರ್ವಾದಗಳನ್ನು ಕೊಡುವೆನೆಂದು ಉದ್ದೇಶಿಸಿದ್ದನು. ದೇವರಿಂದ ನಾವು ಆಶೀರ್ವದಿಸಲ್ಪಡುವ ನಿರೀಕ್ಷೇಯು ದೇವರು ಅಬ್ರಹಾಮನಿಗೆ ಕೊಟ್ಟ ಈ ವಾಗ್ದಾನದ ಮೇಲೆ ಅವಲಂಭಿಸಿದೆ.

ಅಬ್ರಹಾಮನು ದೇವರ ಸ್ವರಕ್ಕೆ ವಿಧೇಯನಾದನು (ಆದಿಕಾಂಡ 22:18) ಮತ್ತು ನಾವು ಅದನ್ನು ಮಾಡಿದರೆ ನಾವೂ ಆಶೀರ್ವದಿಸಲ್ಪಡುವೆವು. ನಿತ್ಯ ರಕ್ಷಣೆಯ ಮೂಲನಾದ ಯೇಸುವಿಗೆ ವಿಧೇಯರಾಗುವದರಿಂದ ದೇವರನ್ನು ನಾವು ಹಿಂಬಾಲಿಸ ಬೇಕು (ಇಬ್ರಿಯ 5:9). ನಾವು "ಅಬ್ರಹಾಮನ ವಿಶ್ವಾಸದವರು" ಆಗುವ ಅವಶ್ಯಕತೆಯಿದೆ (ರೋಮಾಪುರ 4:16).

© 2009 Truth for Today